ಶ್ರೀ ಎಸ್. ನಿಜಲಿಂಗಪ್ಪ.—ಹಾಗೇನಾದರೂ ಇದ್ದರೆ ವಿಚಾರ ತಿಳಿಸಿದರೆ ಸೂಕ್ತ ಪ್ರಮಾಣ ತೆಗೆದು ಕೊಳ್ಳಬೇಕಾಗುತ್ತದೆ.

ಶ್ರೀ ಎನ್. ನಂಜೇಗೌಡ.—ಸಹಕಾರ ಸಂಸ್ಥೆಗಳು ವಿಲೇವಾರಿಯಾದಾಗ ಸರ್ಕಾರ ಸೊಸೈಟಿಗೆ 9 ರೂಪಾಯಿ, ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗೆ 11 ರೂಪಾಯಿ, ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಗೆ 10 ರೂಪಾಯಿ ಹೀಗೆ 30 ರೂಪಾಯಿ ಹಂಚಿಕೆಯಾಗುತ್ತದೆ. ಕೇವಲ 2-3 ಸಾವಿರ ರೂಪಾಯಿ ವ್ಯಾಪಾರ ಮಾಡುವುದಕ್ಕೆ 9 ರೂಪಾಯಿ ಮಾಡಿ ಕೋಟಿಗಟ್ಟಲೆ ವ್ಯಾಪಾರಮಾಡುವುದಕ್ಕೆ 10-11 ರೂಪಾಯಿ ಮಾಡಿರುವುದು ಸರಿಯಲ್ಲ. ಇದನ್ನು ಯೋಚಿಸಿ ಸೇವಾ ಸಹಕಾರ ಸಂಘಗಳಿಗೆ ಹೆಚ್ಚು ಕೊಡುವ ಹಾಗೆ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಅದಾಗುವುದಿಲ್ಲ, ಎಲ್ಲವನ್ನೂ ಆಲೋಚನೆ ಮಾಡಿ ಆ ರೀತಿ ಮಾಡಿದ್ದಾಗಿದೆ.

Sri B. BHASKER SHETTY (Kaup).—Sir, I put Question No. 383.

Mr. SPEAKER.—Yes.

Sanctioning of Electric Pumpsets.

*Q.—383. Sri DAYANAND R. KALLE (Karkal).—

Will the Government be pleased to state :—

(*a*) the number of electricpump sets for which applications have been received during 1961-63, 1963-64, 1964-1965 and 1965-66 in Karkal Taluk, South Kanara District ;

(*b*) the number of pumpsets that are sanctioned and installed during the above said years ;

(*c*) the number of acres that are brought under (i) crops and (ii) food crops by these installations during the above said years ?

A.—Sri G. B. SHANKAR RAO (Parliamentary Secretary to the Minister for Public Works).—

(*a*) and (*b*) *Vide* Statement appended.

(*c*) About one acre can be brought under cultivation per H. P. of installed capacity which will yield about half a ton of foodgrains.

Statement showing the applications received, pumpsets issued, serviced, etc., in Karkal Taluk, South Kanara District.

Sl. No.	Particulars	Year				Total
		1962-63	1963-64	1964-65	1965-66	
1	Applications received	Nil	110	34	13	157
2	Applications processed.	...	58	27	10	95
3	Pumpsets issued. ...	...	45	11	2	58
4	Pumpsets serviced out of Item No. 3.	...	39	5	...	44

ಶ್ರೀ ಬಿ. ಭಾಸ್ಕರಶೆಟ್ಟಿ.—4 ವರ್ಷಗಳಲ್ಲಿ 44 ಪಂಪುಸೆಟ್ಟುಗಳಿಗೆ ಮಾತ್ರ ಸರ್ವಿಸ್ ಕೊಟ್ಟರೆ ಆಹಾರ ಹೆಚ್ಚಾಗಿ ಉತ್ಪತ್ತಿಮಾಡಲು ಹೇಗೆ ಸಾಧ್ಯ ?

Sri G. B. SHANKAR RAO.—Some applicants have not produced their ownership certificates and the certificates regarding rights over water.

ಶ್ರೀ ಬಿ. ಭಾಸ್ಕರಶೆಟ್ಟಿ.—1965-66ನೆಯ ಸಾಲಿನಲ್ಲಿ 2 ಪಂಪುಸೆಟ್ಟುಗಳನ್ನು ಮಾತ್ರ ಕೊಡ ರಾಗಿದೆ. ಅವುಗಳಿಗಾದರೂ ಏಕೆ ಸರ್ವಿಸ್ ಕೊಟ್ಟಿಲ್ಲ ?

Sri G. B. SHANKAR RAO.—It requires the completion certificate by the parties themselves. They have not produced it and we cannot give service to the pump sets.

ಶ್ರೀ ಬಿ. ಭಾಸ್ಕರಶೆಟ್ಟಿ.—ಸರ್ಟಿಫಿಕೇಟನ್ನು ಹಾಜರುಮಾಡಿದಮೇರೆಗೆ ಪಂಪುಸೆಟ್ಟು ಕೊಡು ವುದು. ಇರಾಖೆ ಪಂಪುಸೆಟ್ಟು ಕೊಡಬೇಕಾದರೆ ಬೇಕಾದ ಹಕ್ಕಿದಯೇ ಎಂದು ನೋಡಿರುತ್ತಾರೆ. ಹಾಗಿರುವಾಗ ಎರಡಕ್ಕಾದರೂ ಸರ್ವಿಸ್ ಕೊಡುವುದಕ್ಕಾಗಲಿಲ್ಲವೇ ?

ಶ್ರೀ ಜಿ. ಬಿ. ಶಂಕರರಾವ್.—ಇರಾಖೆಯವರೇ ಫಾರ್ಮ್ಯಾರೆಟೀಸ್ ಪೂರ್ಣಮಾಡಬೇಕೆಂದಿಲ್ಲ. It is for the parties themselves to approach the Revenue Authorities and get these certificates.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಸರ್ಟಿಫಿಕೇಟ್ ಬಾರದೇ ಇದ್ದರೆ ಅವರಿಗೆ ಪಂಪ್‌ಸೆಟ್ಟು ಏತಕ್ಕೆ ಕೊಡಬೇಕು ? ಪಂಪ್‌ಸೆಟ್ ಇಲ್ಲದೇ ಇರುವಾಗ್ಗೆ ಅವರು ಅದಕ್ಕಾಗಿ ಕಾಯುತ್ತ ಕೂಡ ಬೇಕಾಗುತ್ತದೆ. ಪಂಪ್‌ಸೆಟ್ಸ್ ಇನ್‌ಸ್ಟಾಲ್ ಮಾಡುವುದಕ್ಕೆ ಸರ್ಟಿಫಿಕೇಟ್ ಇಲ್ಲವಾದರೆ ಅವರಿಗೆ ಎಲ್ಲರು ಏತಕ್ಕೆ ಕೊಡಬೇಕು ?

ಶ್ರೀ ಜಿ. ಬಿ. ಶಂಕರರಾವ್.—ಕೆಲವು ಫಾರ್ಮ್ಯಾರೆಟೀಸ್ ಅನುಸರಿಸಬೇಕಾಗುತ್ತದೆ. ರೆವಿನ್ಯೂ ಅಥಾರಿಟೀಸ್ ಸರ್ಟಿಫಿಕೇಟ್ ಕೊಡುತ್ತಾರೆ. ಸರ್ಟಿಫಿಕೇಟ್ ಇಲ್ಲದಿದ್ದರೆ ಸರ್ವಿಸ್ ಮಾಡು ವುದಕ್ಕೆ ತಡವಾಗುತ್ತದೆ.

Lift Irrigation Schemes in South Kanara District.

*Q.—437. Sri SANJEEVANATH AIKALA (Surathkal).—

Will the Government be pleased to state :—

(*a*) the number of Lift Irrigation schemes and minor Irrigation works which have been sanctioned in the South Kanara District under Crash (Emergency) programme ;

(*b*) which are those works (Taluk-wise) break-up may be given ;

(*c*) the area that is to be benefitted under each lift irrigation scheme and minor irrigation works and the estimated cost of each of them ;

(*d*) the progress achieved in the execution of these schemes and works till 15-12-1966 ?

*A.—Sri ALUR HANUMANTHAPPA (Deputy Minister for Minor Irrigation)—

(*a*) Lift Irrigation Schemes—12.

M. I.—15 to be completed by March 1966.
13 to be completed by June 1966.
30 to be completed after June 1966.